ರಾಜ್ಯದಲ್ಲಿರುವ ಹಾಪ್‌ಕಾಮ್ಸ್ ಮಾರಾಟ ಮಳಿಗೆಗಳು.

1596 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೊಡು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಹಾಪ್‌ಕಾಮ್ಸ್ ಮಾರಾಟ ಮಳಿಗೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ ಬೆಂಗಳೂರಿನಲ್ಲಿರುವ ಮಳಿಗೆಗಳ ಸಂಖ್ಯೆ ಎಷ್ಟು?

ಇ) ಬಳ್ಳಾರಿ ಜಿಲ್ಲೆಯಲ್ಲಿ ಈ ರೀತಿಯ ಮಾರಾಟ ಮಳಿಗೆಗಳ ಸಂಖ್ಯೆ ಎಷ್ಟು?

ಈ) ಸರ್ಕಾರವು ಹಾಪ್ ಕಾಮ್ಸ್‌ಮೂಲಕ ತೋಟಗಾರಿಕೆ ಬೆಳೆಗಳ ಮಾರುಕಟ್ಟೆ ಸೌಲಭ್ಯವನ್ನು ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲು ನಿರ್ಧರಿಸಿದೆಯೇ?

ಉ) ಹಾಗಾದರೆ ಎಲ್ಲಾ ತಾಲ್ಲೂಕುಗಳಿಗೆ ಯಾವಾಗ ವಿಸ್ತರಿಸಲಾಗುವುದು.

ಊ) ಈ ಬಗ್ಗೆ ಎಸ್‌ಸಿಡಿಸಿಯು ನೆರವು ನೀಡಲು ಒಪ್ಪಿರುತ್ತದೆಯೇ?

ಋ) ಹಾಗಾದರೆ ಎಸ್‌ಸಿಡಿಸಿ ವತಿಯಿಂದ ನೀಡುವ ಆರ್ಥಿಕ ಸಹಾಯಕ ಮೊತ್ತವೆಷ್ಟು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಹಾಪ್‌ಕಾಮ್ಸ್‌ನ ಒಟ್ಟು ಮಾರಾಟ ಮಳಿಗೆಗಳು 380

ಆ) ಬೆಂಗಳೂರಿನಲ್ಲಿರುವ ಮಳಿಗೆಗಳ ಸಂಖ್ಯೆ235 ಬೆಂಗಳೂರು ನಗರ221, ಬೆಂಗಳೂರು (ಗ್ರಾ) 14.

ಇ) ಬಳ್ಳಾರಿ ಜಿಲ್ಲೆಯಲ್ಲಿ ಬೆಂಗಳೂರು ಬೆಂಗಳೂರು ಹಾಪ್‌ಕಾಮ್ಸ್‌ನ ಮಳಿಗೆಗಳು ಇರುವುದಿಲ್ಲ.

ಈ) ಇಲ್ಲ. ಪ್ರಸ್ತುತ ಸರ್ಕಾರವು ಹಾಪ್‌ಕಾಮ್ಸ್ ಲಾಲ್‌ಬಾಗ್, ಬೆಂಗಳೂರು ಸಂಸ್ಥೆಯು ತನ್ನ ಕಾರ್ಯವ್ಯಾಪ್ತಿ, ಬೆಂಗಳೂರು, ಮೈಸೂರು ದಕ್ಷಿಣ ಕನ್ನಡ ತುಮಕೂರು, ಹಾಸನ, ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಂಡಿದೆ.

ಉ) ಎಸ್.ಸಿ.ಡಿ.ಸಿ. ಜೊತೆ ವ್ಯವಹರಿಸಲಾಗುತ್ತಿರುವ ಯೋಜನೆಯಡಿ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲು ಯೋಜಿಸಲಾಗಿದೆ.

ಊ) ಎಸ್.ಸಿ.ಡಿ.ಸಿ.ಯವರು ಆರ್ಥಿಕ ನೆರವನ್ನು ನೀಡಲು ತಾತ್ವಿಕವಾಗಿ ಒಪ್ಪಿದೆ.

ಋ) ಈ ಯೋಜನೆಯ ಒಟ್ಟು ವೆಚ್ಚ ರೂ.66.5875 ಕೋಟಿಗಳು (1ನೇ ಹಂತ ರೂ.31.92 ಕೋಟಿಗಳು 2ನೇ ಹಂತ ರೂ.23.00 ಕೋಟಿಗಳು)

ಎಸ್.ಸಿ.ಡಿ.ಸಿ.ಯಿಂದ ಕೊಡಲ್ಪಡುವ ಸಾಲ ಮತ್ತು ಸಿಬಿಸಿಡಿಯನ್ನು ಒಳಗೊಂಡ ಆರ್ಥಿಕ ಸೌಲಭ್ಯವು

1ನೇ ಹಂತದ ಯೋಜನೆಗಾಗಿ

ಒಟ್ಟು ರೂ.31.92 ಕೋಟಿಗಳಷ್ಟು ಆಗುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಹೈನುಗಾರಿಕೆ ಮಹಾವಿದ್ಯಾಲಯ ಸ್ಥಾಪಿಸುವ ಪ್ರಸ್ತಾವನೆ.

1597 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಹೈನುಗಾರಿಕೆ ಮಹಾವಿದ್ಯಾಲಯ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಾದಲ್ಲಿ ತೋರಣಗಲ್‌ನ ಹತ್ತಿರವಿರುವ ಕುರಿಕೊಪ್ಪದಲ್ಲಿ 300-400 ಎಕರೆ ಜಮೀನು ಲಭ್ಯವಿರುವುದು ಸರ್ಕಾರಕ್ಕೆ ಗೊತ್ತಿದೆಯೇ?

ಇ) ನಿಯೋಜಿತ ಮಹಾವಿದ್ಯಾಲಯವು ಯಾವಾಗ ಪ್ರಾರಂಭವಾಗುವುದು.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) ಹೌದು

ಆ) ಹೌದು

ಇ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಕೃಷಿ ಮಹಾವಿದ್ಯಾಲಯಗಳು

1598 - ಶ್ರೀ ಅಲ್ಲಮ ವೀರಬದ್ರಪ್ಪ (ಕುರುಗೋಡು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಜಿಲ್ಲೆಗಳಲ್ಲಿ ಕೃಷಿ ಮಹಾವಿದ್ಯಾಲಯಗಳು ಇರುವುದಿಲ್ಲ.

ಆ) ಬಳ್ಳಾರಿಯಲ್ಲಿ ಕೃಷಿ ಮಹಾವಿದ್ಯಾಲಯವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :

ಅ) ಮೈಸೂರು, ತುಮಕೂರು, ಚಿತ್ರದುರ್ಗ ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಕೃಷಿ ವಿಜ್ಞಾನ ವಿಷಯಗಳಿಗೆ ನಂಬಂಧಿಸಿದಂತೆ ಮಹಾವಿದ್ಯಾಲಯಗಳು ಇರುವುದಿಲ್ಲ.